ಅವರು ಸರಿಯಾಗಿ ನಾಲ್ಕು ಗಂಟೆಗೆ ನನ್ನ ಮನೆಯ ಕಾಲಿಂಗ್‌ಬೆಲ್ ಒತ್ತಿದರು.

ಅವರು ಅಂದರೆ, ಡಾ. ಸೋನಿಪತ್. ಪೂರ್ತಿ ಹೆಸರು ಡಾ. ವಿಜೇಂದರ್‌ನಾಥ್ ಸೋನಿಪತ್. ಸದೃಢ ದೇಹ, ಐದು ನಾಲ್ಕರಷ್ಟು ಎತ್ತರವಿರಬಹುದು. ಎಣ್ಣೆಗಪ್ಪು ಬಣ್ಣ. ಎಂಬತ್ತು ದಾಟಿರಬೇಕು. ತಲೆ ಕೂದಲು ಬಿಳಿ ಬಿಳಿಯಾಗಿದೆ. ಗಡ್ಡ ಬಿಟ್ಟಿಲ್ಲ. ಮೂಲತಃ ಹರಿಯಾಣದ ಸೋನಿಪತ್‌ನವರು. ನನ್ನ ಮನೆ ಇರುವ ಬೀದಿಯಲ್ಲಿ ಐದನೆಯ ಮನೆ ಅವರದೆ. ಮೈನ್, ಕ್ರಾಸ್, ಸ್ಟೇಜ್, ಫೇಸ್ ಎಲ್ಲಾ ಒಂದೇ.

ನಾನು ಬಾಗಿಲು ತೆಗೆದೆ. ಅವರು ಕೈಕುಲುಕಿ 'ಮೇ ಐ ಕಮಿನ್ ಜಂಟಲ್‌ಮ್ಯಾನ್' ಎಂದು ಅನುಮತಿ ಕೇಳಿದರು. ತಲೆಯಾಡಿಸಿ ಸೋಫಾ ತೋರಿಸಿದಾಗ ಸೌಜನ್ಯದಿಂದ, 'ಥ್ಯಾಂಕ್ಸ್' ಎಂದರು. ಅವರ ವರ್ತನೆಗಳೆಲ್ಲ ಇಂಗ್ಲೆಂಡಿನ ನಾಗರಿಕನಂತಿದ್ದವು.

"ಟೀ? ಕಾಫಿ?"

